# ಅಂದದಿ ಹೊರಟಾವು ಅಂಕಲಿಯ ಕುದುರೆ

■ ಚಂದ್ರಶೇಖರ ಎಸ್ ಚಿನಕೇಕರ



ಮಹೇಶ ಲೋಂಕರ

ದಕ್ಷಿಣ ಭಾರತದ ಕೋಟ್ಯಂತರ ಭಕ್ತರ ಪವಿತ್ರ ಕ್ಷೇತ್ರವಾದ ಮಹಾರಾಷ್ಟ್ರದ ಪಂಢರಪುರ ವಿಠಲನ ಸನ್ನಿಧಿಯಲ್ಲಿ ಪ್ರತಿವರ್ಷ ಆಷಾಢ ಮಾಸದಲ್ಲಿ ಕನ್ನಡನಾಡಿನ ಕುದುರೆಗಳಿಗೆ 'ರಾಜ ಮರ್ಯಾದೆ' ಸಿಗುತ್ತದೆ. ಆಷಾಢ ಏಕಾದಶಿಯ ಸಂದರ್ಭದಲ್ಲಿ ಮಹಾರಾಷ್ಟ್ರದ ಪುಣೆ ಸಮೀಪವಿರುವ ಆಳಂದಿಯಿಂದ ಪಂಢರಪುರಕ್ಕೆ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಹೊರಡುವ ಸಂತ ಜ್ಞಾನೇಶ್ವರ ಮಹಾರಾಜರ ಪಲ್ಲಕ್ಕಿಯ ಮಾವುಲಿ ರಥದ ಮುಂದೆ ರಾಜ್ಯದ ಬೆಳಗಾವಿ ಜಿಲ್ಲೆಯ ಹೀರಾ ಮತ್ತು ಮೋತಿ ಕುದುರೆಗಳಿಗೆ ಅಗ್ರಸ್ಥಾನವಿದೆ.

ಆಳಂದಿಯಿಂದ ಪಂಢರಪುರಕ್ಕೆ ತೆರಳುವ 315 ಕಿ.ಮೀ ದೂರದ ಮಾರ್ಗದುದ್ದಕ್ಕೂ ಕನ್ನಡ ನಾಡಿನ ಕುದುರೆಗಳನ್ನು ಭಕ್ತರು ಪೂಜಿಸುತ್ತಾರೆ. ಪಂಢರಪುರದಲ್ಲಿ ಆಷಾಢ ಏಕಾದಶಿ ಜಾತ್ರಾ ಮಹೋತ್ಸವದಲ್ಲಿ ಆರತಿ ಬೆಳಗಿ, ಮಹಾ ನೈವೇದ್ಯ ಅರ್ಪಿಸುತ್ತಾರೆ. ಹೀಗಾಗಿ ಕರ್ನಾಟಕದ ಹೀರಾ ಮೋತಿ ಕುದುರೆಗಳು ಲಕ್ಷಾಂತರ ಭಕ್ತರ ಆರಾಧ್ಯ ದೈವವಾಗಿವೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಅಂಕಲಿಯ ಶಿಥೋಳೆ ಮನೆತನದವರು ತಲೆತಲಾಂತರದಿಂದ 'ಮಾನ'ದ ಕುದುರೆಗಳನ್ನು ಸಾಕುತ್ತಿದ್ದಾರೆ. 1832ರಿಂದ ಆರಂಭಗೊಂಡ ಈ ಪರಂಪರೆಗೆ 193 ವರ್ಷಗಳಾದವು. ಏಳೆಂಟು ತಲೆಮಾರಿನಿಂದ ಆಷಾಢ ಏಕಾದಶಿಯ ದಿಂಡಿಯಲ್ಲಿ ಮಾತ್ರ ಅಂಕಲಿಯ ಮಾನದ ಕುದುರೆಗಳು ಭಾಗವಹಿಸುವ ಸಂಪ್ರದಾಯವಿದೆ. ಪ್ರತಿವರ್ಷ ಜ್ಯೇಷ್ಠ ಮಾಸದ ದ್ವಾದಶಿಯಂದು ಅಂಕಲಿಯ ಶಿಥೋಳೆ ಸರ್ಕಾರದ ಅರಮನೆ ಆವರಣದ ಅಂಬಾಬಾಯಿ ಮಂದಿರದಲ್ಲಿ ಕುದುರೆಗಳನ್ನು ಪೂಜಿಸಿ ಬೀಳ್ಕೊಡಲಾಗುತ್ತದೆ.

'ಮಾನ' ಎಂದರೇನೆ ಮರ್ಯಾದೆ, ಗೌರವ ಎಂದರ್ಥ, ಪ್ರತಿವರ್ಷ ಇಂತಹದೊಂದು ಸಂಪ್ರದಾಯ ಶಿಥೋಳೆ ಕುಟುಂಬ ನಡೆಸಿಕೊಂಡು ಬರುತ್ತಿದೆ. ಹೀಗಾಗಿ ಮಹಾರಾಷ್ಟ್ರದ ವಿಠಲನ ಸನ್ನಿಧಿಯಲ್ಲಿ ಇದೊಂದು 'ಗೌರವ'ದ ಸಂಪ್ರದಾಯವಾಗಿದ್ದರಿಂದ ಈ ಕುದುರೆಗಳಿಗೆ 'ಮಾನ'ದ ಕುದುರೆಗಳೆಂದು ಕರೆಯಲಾಗುತ್ತದೆ.

ಈ ಎರಡೂ ಕುದುರೆಗಳು ಪ್ರತಿದಿನ 25 30 ಕಿ.ಮೀ. ನಡೆದುಕೊಂಡು 8–10 ದಿನಗಳಲ್ಲಿ ಆಳಂದಿಯನ್ನು ತಲುಪುತ್ತವೆ. ಆಳಂದಿಯಲ್ಲಿ ನಾಲ್ಕೈದು ದಿನ ವಿಶ್ರಾಂತಿ ಪಡೆಯುತ್ತವೆ. ಆಳಂದಿಯಿಂದ ಹೊರಡುವ ಬೃಹತ್ ದಿಂಡಿಯಾತ್ರೆಯಲ್ಲಿ ಪೂಜನೀಯ ಸ್ಥಾನ ಪಡೆದುಕೊಳ್ಳುವ ಅಂಕಲಿಯ ಶಿಥೋಳೆ ಕುಟುಂಬದ ಕುದುರೆಗಳು ಮಹಾರಾಷ್ಟ್ರದ ಮನೆ ಮನೆಯಲ್ಲಿ ಪೂಜಿಸಲ್ಪಡುತ್ತಿವೆ. ಒಂದು ತಿಂಗಳ ಕಾಲ 600 ಕಿ.ಮೀ.ಗೂ ಹೆಚ್ಚು ದೂರ ನಡೆದುಕೊಂಡು ಹೋಗುವ ಕರ್ನಾಟಕದ ಕುದುರೆಗಳು ಎರಡೂ ರಾಜ್ಯಗಳ ಸಾಂಸ್ಕೃತಿಕ ಕೊಂಡಿಯಾಗಿವೆ.

ಅಂಕಲಿಯ ಶಿಥೋಳೆ ಕುಟುಂಬದ ಶ್ರೀಮಂತ ಉರ್ಜಿತಸಿಂಹ ರಾಜೆ ನೇತೃತ್ವದಲ್ಲಿ ನಡೆಯುವ ಏಕಾದಶಿ ದಿಂಡಿಯಾತ್ರೆಯಲ್ಲಿ ಹೀರಾ ಕುದುರೆಯ ಮೇಲೆ ಸಂತ ಜ್ಞಾನೇಶ್ವರ ಮಹಾರಾಜರ ಪಾದುಕೆ ಇಟ್ಟು ಮೆರವಣಿಗೆ ಸಾಗುತ್ತದೆ. ಹೀರಾ ಕುದುರೆಗೆ ಸಾಥಿಯಾಗಿ ಮೋತಿ ಕುದುರೆಯನ್ನು ದಿಂಡಿಯಾತ್ರೆಯಲ್ಲಿ ತೆಗೆದುಕೊಂಡು ಹೋಗಲಾಗುತ್ತದೆ. ತುಕಾರಾಂ ಕೋಳಿ ಮತ್ತು ಅಕ್ಷಯ ಪರೀಟ ಎಂಬುವವರು ಈ ಕುದುರೆಗಳನ್ನು ಸಲಹುವುದರೊಂದಿಗೆ ಸವಾರಿ ಮಾಡುತ್ತಾರೆ. ಒಂದು ತಿಂಗಳ ಅವಧಿಯಲ್ಲಿ ಎಲ್ಲೆಲ್ಲಿ ದಿಂಡಿ ತಂಗುತ್ತದೆಯೋ ಅಲ್ಲೆಲ್ಲ ಭಕ್ತರು ಆಗಮಿಸಿ ಕುದುರೆಗಳಿಗೆ ನಮಿಸುತ್ತಾರೆ. ಪೂಜೆ ಸಲ್ಲಿಸುತ್ತಾರೆ.

ಅಂಕಲಿಯ ಶಿಥೋಳೆ ಕುಟುಂಬದವರು ಯಾವುದೇ ಕುದುರೆಯನ್ನು ಖರೀದಿಸಿಯೇ ತರಲಿ, ಯಾರಾದರೂ ದಾನವಾಗಿಯೇ ನೀಡಲಿ ಆ ಕುದುರೆಗಳಿಗೆ ಹೀರಾ ಮತ್ತು ಮೋತಿ ಎಂದೇ ನಾಮಕರಣ ಮಾಡುವುದು ರೂಢಿಯಲ್ಲಿದೆ. ಅಲ್ಲದೇ, ತುಕಾರಾಂ ಕೋಳಿ ಹಾಗೂ ಅಕ್ಷಯ ಪರೀಟ ಅವರು ಕಳೆದ 20 ವರ್ಷಗಳಿಂದ ಈ ಕುದುರೆಗಳನ್ನು ನೋಡಿಕೊಳ್ಳುತ್ತಾರೆ. ಇದಕ್ಕೆ ಬೇಕಾಗುವ ಖರ್ಚು ವೆಚ್ಚಗಳನ್ನೆಲ್ಲ ಶಿಥೋಳೆ ಕುಟುಂಬವೇ ನೀಡುತ್ತದೆ. ತುಕಾರಾಂ ಹಾಗೂ ಅಕ್ಷಯ ಅವರಿಗೂ ಮೊದಲು ಇವರ ತಂದೆ, ತಾತ ಕುದುರೆಗಳ ದೇಕರೇಕಿ ಮಾಡುತ್ತಿದ್ದರು. ಶಿಥೋಳೆ ಕುಟುಂಬದವರಂತೆ ಇವರಿಗೂ ಇದು ತಲೆತಲಾಂತರದಿಂದ ಬಂದಿದೆ.

ದಿಂಡಿಯಾತ್ರೆ ತಂಗಿರುವ ಕೆಲವೊಂದು ಕಡೆಗೆ ಹೀರಾ ಮತ್ತು ಮೋತಿ ಕುದುರೆಗಳನ್ನು ಒಂದು ಜಾಗೆಯಲ್ಲಿ ವರ್ತುಲಾಕಾರವಾಗಿ ಓಡಿಸಲಾಗುತ್ತದೆ. ಇದಕ್ಕೆ 'ರಿಂಗಣ' ಎಂದು ಕರೆಯಲಾಗುತ್ತದೆ. ಹೀಗೆ ರಿಂಗಣದಲ್ಲಿ ಕುದುರೆಗಳನ್ನು ಓಡಿಸಬೇಕಾದರೆ ಸವಾರರಿಗೆ ಎಂಟೆದೆಯ ಚಾತಿಯೇ ಬೇಕು. ಆಗಲೇ ಕುದುರೆಗಳನ್ನು ಓಡಿಸಲು ಸಾಧ್ಯವಾಗುತ್ತದೆ. ಹೀಗೆ ರಿಂಗಣದಲ್ಲಿ ಓಡಿಸುವ ಕುದುರೆಗಳನ್ನು ವೀಕ್ಷಿಸಲು ಸುತ್ತಮುತ್ತಲಿನ ಸಹಸ್ರಾರು ಜನರು ನೋಡಿ ಖುಷಿಪಡುತ್ತಾರೆ. ಇದು ಅರ್ಧ ಗಂಟೆಗೂ ಹೆಚ್ಚು ಕಾಲ ನಡೆಯುತ್ತದೆ. ಒಂದು ತಿಂಗಳ ಅವಧಿಯಲ್ಲಿ ಕನಿಷ್ಠ 10–15 ಸ್ಥಳಗಳಲ್ಲಿ ಹೀಗೆ ಕುದುರೆಗಳ 'ರಿಂಗಣ'ದ ಓಟ ನೋಡಲು ಸಿಗುತ್ತದೆ. ■